# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 689 (573) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |
| ಉತ್ತರಿಸುವ ದಿನಾಂಕ | : | 21.02.2023 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಯೋಜನೆಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ಮತ್ತು ಯೋಜನೆಯ ಮೂಲ ಕಾರ್ಯೋದ್ದೇಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: CI 69 SPI 1992, ದಿನಾಂಕ 22.05.1992ರಲ್ಲಿ ಕರ್ನಾಟಕ ಸೊಸೈಟೀಸ್ (ನೋಂದಣಿ) ಕಾಯಿದೆ 1960 ಅಡಿಯಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯನ್ನು 1992ರಲ್ಲಿ ಸ್ಥಾಪಿಸಲಾಗಿದೆ.<br><br>ಗುರಿಗಳು ಮತ್ತು ಉದ್ದೇಶಗಳು:<br>➢ ಕರ್ನಾಟಕದಲ್ಲಿ ಕೈಗಾರಿಕಾ ಹೂಡಿಕೆಯಲ್ಲಿ ಆಸಕ್ತರಾಗಿರುವ ಎಲ್ಲಾ ಹೂಡಿಕೆದಾರರಿಗೆ/ಉದ್ಯಮಿಗಳಿಗೆ ಬೆಂಬಲ ಮತ್ತು ಬೆಂಗಾವಲು ಸೇವೆಗಳನ್ನು ನೀಡುವುದು.<br>➢ ಜಾಹೀರಾತು ಮತ್ತು ಪ್ರಚಾರದ ಮೂಲಕ ಸಾಮೂಹಿಕ ಮಾಧ್ಯಮದ ಮೂಲಕ ಮಾಹಿತಿಯನ್ನು ಪ್ರಸಾರ ಮಾಡಲು, ಮತ್ತು ರಾಜ್ಯದಲ್ಲಿನ ಹೊಸ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಸೌಲಭ್ಯಗಳನ್ನು ಮತ್ತು ಉದ್ಯಮಿಗಳಿಗೆ ಲಭ್ಯವಿರುವ ಪ್ರೋತ್ಸಾಹದ ಬಗ್ಗೆ ಜಾಗೃತಿ ಮೂಡಿಸುವುದು.<br>➢ ನಿರೀಕ್ಷಿತ ಹೂಡಿಕೆದಾರರು/ಉದ್ಯಮಿಗಳನ್ನು ಗುರುತಿಸಲು ಮತ್ತು ಉತ್ತೇಜಿಸಲು ಹಾಗೂ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಅವರುಗಳನ್ನು ಪ್ರೋತ್ಸಾಹಿಸುವುದು.<br>➢ ಉದ್ಯಮದಲ್ಲಿ ವ್ಯಾಪಾರ, ವಾಣಿಜ್ಯ ಮತ್ತು ಪಾಲ್ಗೊಳ್ಳುವಿಕೆಗೆ ಕರ್ನಾಟಕದಲ್ಲಿ ಲಭ್ಯವಿರುವ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ, ಹೂಡಿಕೆದಾರರು ಮತ್ತು ಉದ್ಯಮಶೀಲರಿಗೆ ಮಾಹಿತಿಯನ್ನು ಒದಗಿಸುವುದು.<br>➢ ಕರ್ನಾಟಕ ಒಳಗೆ ಮತ್ತು ಹೊರಗೆ ವಾಸಿಸುವ ನಿರೀಕ್ಷಿತ ಬಂಡವಾಳ ಹೂಡಿಕೆದಾರರನ್ನು ಗುರುತಿಸಲು ಮತ್ತು ಸಂಪರ್ಕಿಸಲು, ಆ ಪ್ರದೇಶದಲ್ಲಿ ನೆಲೆಸಿರುವ ಹೂಡಿಕೆದಾರರಿಗೆ/ ಉದ್ಯಮಿಗಳಿಗೆ ವಿಶೇಷ ಶಿಬಿರಗಳನ್ನು/ ವಿಚಾರಗೋಷ್ಠಿಗಳು ಮತ್ತು ಸಭೆಗಳು ಇತ್ಯಾದಿ ಹಮ್ಮಿಕೊಳ್ಳುವುದು.<br>➢ ಅನಿವಾಸಿ ಭಾರತೀಯರು (ಎನ್.ಆರ್.ಐ)ಗಳನ್ನು ಮತ್ತು ಸಂಬಂಧಿತ ಸರ್ಕಾರಿ ಏಜೆನ್ಸಿಗಳನ್ನು ನಿರಂತರ ಸಂಪರ್ಕ ದಲ್ಲಿರಿಸಿಕೊಂಡು, ಸಹಾಯ ಮತ್ತು ವಿದೇಶಿ ಬಂಡವಾಳ ಹೂಡಿಕೆ ಪ್ರಚಾರ ಮತ್ತು ಪ್ರಚಾರ ಕಾರ್ಯಗಳನ್ನು ಮಾಡುವುದು.<br>➢ ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಯ ಉತ್ತೇಜನವನ್ನು ಗುರಿಯಾಗಿಟ್ಟುಕೊಂಡು, ಪ್ರಾಯೋಜಿಸಲು, ಸಂಯೋಜಿಸಲು ಅಥವಾ ವ್ಯಾಪಾರ ಮೇಳ, ಪ್ರದರ್ಶನ, ಅಥವಾ ಅಭಿಯಾನದಲ್ಲಿ ಭಾಗವಹಿಸುವುದು. |

| | | |
|---|---|---|
| | | ➢ ಪತ್ರಿಕೆಗಳು, ವಿಶ್ಲೇಷಣೆಗಳು, ವರದಿಗಳು, ಕೈಪಿಡಿಗಳು, ಕರಪತ್ರಗಳು, ನಿಯತಕಾಲಿಕೆಗಳು ಮತ್ತು ಯೋಜನೆ ಪ್ರೋಫೈಲ್‌ಗಳು ಇತ್ಯಾದಿಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುವುದು.<br>➢ ಕರ್ನಾಟಕ ಇಂಡಸ್ಟ್ರೀಸ್ ಫೆಸಿಲಿಟೇಶನ್ ಆಕ್ಟ್, 2002 ಹಾಗೂ ಅದರ ನಿಯಮಗಳ ಪ್ರಕಾರ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ (SLSWCC) ಮತ್ತು ರಾಜ್ಯ ಉನ್ನತ ಮಟ್ಟದ ಸಮಿತಿಯ (SHLCC) ಸಚಿವಾಲಯವಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ. |
| ಆ | ರಾಜ್ಯದಲ್ಲಿ ರಾಷ್ಟ್ರೀಯ ಇ-ಗವರ್ನೆನ್ಸ್ ಯೋಜನೆ (NECP) ಅಡಿ ಸುಲಲಿತವಾಗಿ ಸರ್ಕಾರದೊಂದಿಗೆ ವ್ಯವಹಾರ ನಡೆಸಲು ರೂಪಿಸಿರುವ ಕಾರ್ಯತಂತ್ರಗಳು ಯಾವುವು ಮತ್ತು ಈ ಕಾರ್ಯತಂತ್ರಗಳಿಗೆ ಉಪಯೋಗಿಸುತ್ತಿರುವ ತಂತ್ರಾಂಶಗಳು ಯಾವುವು; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯಲ್ಲಿ ಈ ತಂತ್ರಾಂಶಗಳನ್ನು ಪಡೆದಿರುವುದಿಲ್ಲ. |
| ಇ | ರಾಜ್ಯದಲ್ಲಿ ಸುಲಲಿತವಾಗಿ ವ್ಯವಹರಿಸಲು ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ದೊರೆತಿರುವ ಧನ ಸಹಾಯ ಹಾಗೂ ಇತರೆ ಸೌಲಭ್ಯಗಳು ಯಾವುವು; | ಧನಸಹಾಯ ಪಡೆದಿರುವುದಿಲ್ಲ. |
| ಈ | ಈ ಯೋಜನೆ ಅಡಿ ಯಾವ-ಯಾವ ಪ್ರದೇಶಗಳಲ್ಲಿ ಹೊಸ ಉದ್ಯಮಗಳನ್ನು ಸ್ಥಾಪಿಸಲಾಗಿದೆ; ಮತ್ತು ಎಷ್ಟು ಮಂದಿ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಲಾಗಿದೆ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಏಕಗವಾಕ್ಷಿ ಅನುಮೋದನಾ ಸಮಿತಿಗಳಿಂದ (SLSWCC & SHLCC) ಒಟ್ಟು 1319 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡಲಾಗಿದೆ. ಇವುಗಳಿಂದ ರಾಜ್ಯದಲ್ಲಿ ಸುಮಾರು 4,40,456 ಉದ್ಯೋಗಾವಕಾಶಗಳು ಲಭ್ಯವಾಗಲಿದೆ.<br>ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಉ | ರಾಜ್ಯದಲ್ಲಿ ಕೈಗಾರಿಕೆ ಇಲಾಖೆಯಿಂದ "ಉದ್ಯಮಿಯಾಗು-ಉದ್ಯೋಗ ನೀಡು" ಎನ್ನುವ ಯೋಜನೆ ಅನುಷ್ಠಾನ ಯಾವ ಹಂತದಲ್ಲಿದೆ ಮತ್ತು ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ದೊರೆತಿರುವ ವಿವಿಧ ರೀತಿಯ ಬೆಂಬಲಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | "ಉದ್ಯಮಿಯಾಗು - ಉದ್ಯೋಗ ನೀಡು" ಕಾರ್ಯಕ್ರಮವನ್ನು ರಾಜ್ಯದ ಆರು ಪ್ರಮುಖ ಕೇಂದ್ರಗಳಲ್ಲಿ ನಡೆಸಲಾಗಿದೆ.<br>ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.<br>ಈ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಬೆಂಬಲ ದೊರೆತಿರುವುದಿಲ್ಲ |

ಸಿಐ 35 ಎಸ್‌ಪಿಐ 2023

(ಡಾ. ಮುರುಗೇಶ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

## Annexure-1 to Unstarred LCQ 689 (573)

**Detials of Projects approved in SLSWCC & SHLCC in last three years**

| SL No | District | No of Industries | Investment In crores | Employment |
|---|---|---|---|---|
| 1 | 2 | 3 | 4 | 5 |
| 1 | Bengaluru Urban | 74 | 21562 | 39119 |
| 2 | Bengaluru Rural | 291 | 29839 | 153783 |
| 3 | Bidar | 7 | 4246 | 4523 |
| 4 | Bagalakote | 24 | 5182 | 11498 |
| 5 | Bellary | 29 | 12135 | 6560 |
| 6 | Belagavi | 30 | 6359 | 9455 |
| 7 | Chitradurga | 11 | 42750 | 2758 |
| 8 | Chikkaballapura | 137 | 3262 | 22472 |
| 9 | Chamarajanagar | 41 | 2274 | 4716 |
| 10 | Chikkamagaluru | 6 | 25732 | 22089 |
| 11 | Dharwad | 12 | 204 | 1768 |
| 12 | Davanagere | 6 | 1747 | 2687 |
| 13 | Dakshina Kannada | 8 | 67766 | 21827 |
| 14 | Gadag | 5 | 5140 | 1000 |
| 15 | Hassan | 12 | 356 | 1875 |
| 16 | Haveri | 7 | 1153 | 1022 |
| 17 | Koppal | 15 | 20829 | 6023 |
| 18 | Kalaburagi | 11 | 1686 | 13917 |
| 19 | Kodagu | 0 | 0 | 0 |
| 20 | Kolar | 62 | 3208 | 24148 |
| 21 | Mysuru | 101 | 2857 | 9695 |
| 22 | Mandya | 19 | 1450 | 2242 |
| 23 | Raichur | 14 | 272 | 668 |
| 24 | Ramanagara | 106 | 8507 | 31067 |
| 25 | Shivamogga | 1 | 41 | 150 |
| 26 | Tumkur | 155 | 55675 | 23039 |
| 27 | Uttarakannada | 2 | 48 | 60 |
| 28 | Udupi | 4 | 470 | 1885 |
| 29 | Vijayapura | 45 | 6451 | 7233 |
| 30 | Vijayanagara | 2 | 518 | 557 |
| 31 | Yadgiri | 82 | 3136 | 12620 |
| | **Total** | **1319** | **334857** | **440456** |

ಅನುಬಂಧ-2

ಕರ್ನಾಟಕ ರಾಜ್ಯದಲ್ಲಿ ನಡೆಸಲಾದ "ಉದ್ಯಮಿಯಾಗು, ಉದ್ಯೋಗ ನೀಡು" ಕಾರ್ಯಕ್ರಮಗಳ ವಿವರ

| ಕಾರ್ಯಕ್ರಮ ಆಯೋಜಿಸಲಾದ ಜಿಲ್ಲಾ ಕೇಂದ್ರ / ಕಂದಾಯ ವಿಭಾಗ | ಕಾರ್ಯಕ್ರಮ ಆಯೋಜಿಸಿದ ದಿನಾಂಕ | ಕಾರ್ಯಕ್ರಮ ನಡೆದ ಸ್ಥಳ |
|---|---|---|
| **ಬೆಂಗಳೂರು-1** (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಜಿಲ್ಲೆಗೊಳಗೊಂಡಂತೆ) | 11.10.2021 | ಅರಮನೆ ಮೈದಾನ, ಬೆಂಗಳೂರು |
| **ಕಲಬುರಗಿ** (ಬಳ್ಳಾರಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರ, ಯಾದಗಿರಿ, ವಿಜಯನಗರ ಜಿಲ್ಲೆಗೊಳಗೊಂಡಂತೆ) | 03.01.2022 | ಡಾ|| ಬಿ. ಆರ್. ಅಂಬೇಡ್ಕರ್ ಭವನ, ಗುಲ್ಬರ್ಗ ವಿಶ್ವವಿದ್ಯಾಲಯ ಕಲಬುರಗಿ |
| **ಬೆಳಗಾವಿ** (ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗೊಳಗೊಂಡಂತೆ) | 08.04.2022 | ಕಾನ್ವೋಕೇಷನ್ ಭವನ, ಕೆ.ಎಸ್.ಒ.ಯು, ಮೈಸೂರು |
| **ಮೈಸೂರು** (ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು ಜಿಲ್ಲೆಗೊಳಗೊಂಡಂತೆ) | 28.04.2022 | ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ಭವನ, ವಿಟಿಯು, ಬೆಳಗಾವಿ |
| **ಕರಾವಳಿ ಪ್ರದೇಶ** (ದಕ್ಷಿಣ ಕನ್ನಡ, ಉಡುಪಿ) | 12.05.2022 | ಟಿ.ಎಂ.ಎ.ಪೈ ಇಂಟರ್ ನ್ಯಾಷನಲ್ ಕನ್ವೇನ್ಷನ್ ಸೆಂಟರ್, ಮಂಗಳೂರು |
| **ಬೆಂಗಳೂರು - 2** (ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗೊಳಗೊಂಡಂತೆ) | 23.06.2022 | ಗಂಗಾಧರಯ್ಯ ಮೆಮೋರಿಯಲ್ ಹಾಲ್, ಗುಬ್ಬಿ ರಸ್ತೆ, ತುಮಕೂರು |